ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೬೬೮ (೧೬೯೨)

ಸದಸ್ಯರ ಹೆಸರು ಶ್ರೀ ಧ್ರುವನಾರಾಯಣ ಆರ್

ಉತ್ತರಿಸುವ ಸಚಿವರು ಶ್ರೀ ರಾವು ನಾಯಕ್ ಬೆಳಮಗಿ
(ಪಶುಸಂಗೋಪನೆ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ	ಕಳೆದ ಸಾಲಿನ ಬಜೆಟ್ ನಲ್ಲಿ ಗೋತಳಿಗಳ ಸಂರಕ್ಷಣೆ ಅಧ್ಯತೆ ನೀಡಲಾಗಿದೆ ಎನ್ನುವುದು ನಿಜವೇ?	ಹೌದು, ಸ್ಥಳೀಯ ಗೋತಳಿಗಳ ರಕ್ಷಣೆಗೆ ಸುವರ್ಣ ಕರ್ನಾಟಕ ಗೋತಳಿ ಸಂರಕ್ಷಣ ಯೋಜನೆ ಎಂಬ ನೂತನ ಕಾರ್ಯಕ್ರಮದಡಿ ಸ್ಥಳೀಯ ಗೋತಳಗಳಾದ ಹಳ್ಳಿಕಾರ್, ಅಮೃತಮಹಲ್, ದೇವಣಿ, ಖಿಲಾರ್, ಹಾಗೂ ಕೃಷ್ಣವ್ಯಾಲಿ ತಳಿ ಸಂವರ್ಧನೆ, ಅಭಿವೃದ್ಧಿ ಮತ್ತು ರಕ್ಷಣೆ ಆಧ್ಯತೆ ನೀಡಲಾಗಿದೆ
ಆ	ಗೋತಳಿ ಸಂರಕ್ಷಣೆಗೆ ಎಷ್ಟು ಹಣವನ್ನು ನಿಗಧಿಗೊಳಿಸಲಾಗಿತ್ತು?	ಸ್ಥಳೀಯ ಗೋತಳಿ ಸಂರಕ್ಷಣೆ ಕಾರ್ಯಕ್ರಮದಡಿಯಲ್ಲಿ ರೂ ೨೭೦ ೦೦ ಲಕ್ಷಗಳ ಅನುದಾನ ನಿಗಧಿಪಡಿಸಲಾಗಿತ್ತು
ಇ	ಗೋತಳಿ ಸಂರಕ್ಷಣೆಗೆ ಮೀಸಲಿಟ್ಟ ಹಣದ ಬಳಕೆ ಆಗಿದೆಯೇ?	ಈ ನಿಗಧಿಯಾದ ರೂ ೨೭೦ ೦೦ ಲಕ್ಷಗಳ ಅನುದಾನದಲ್ಲಿ ರೂ ೧೬೯೩ಳಿ ಲಕ್ಷಗಳ ಅನುದಾನ ಇಲ್ಲಿಯವರೆಗೆ ಬಳಕೆ ಆಗಿದೆ
ಈ	ಹಲವಾರು ಜಿಲ್ಲೆಗಳು ಬರಪೀಡಿತವಾಗಿರುವುದರಿಂದ ಗೋತಳಿಗಳನ್ನು	ಚಿತ್ರದುರ್ಗ ಜಿಲ್ಲೆಯಲ್ಲಿ ೨ ಮೇವು ನಿಧಿಗಳನ್ನು ತೆರೆಯಲಾಗಿದೆ

	ರಕ್ಷಿಸಿಕೊಳ್ಳಲು ಮೇವು ಆತ್ಯಗತ್ಯವಾಗಿರುವುದರಿಂದ ಸರ್ಕಾರವು ಮೇವು ಬ್ಯಾಂಕ್ ಸ್ಥಾಪಿಸಿ ಮೇವುಗಳನ್ನು ವಿತರಿಸಲು ಕ್ರಮಕೈಗೊಂಡಿದೆಯೇ?	ಆಯಾ ಜಿಲ್ಲೆಯಲ್ಲಿ ಮೇವಿನ ಪರಿಸ್ಥಿತಿಯನ್ನು ಲಕ್ಷಿಸಿ ಜಿಲ್ಲಾಧಿಕಾರಿಗಳಿಂದ ಮೇವು ನಿಗಧಿಗಳನ್ನು ತೆರೆಯುವ ಬಗ್ಗೆ ಸೂಚನೆಗಳನ್ನು ಸರ್ಕಾರದಿಂದ ನೀಡಲಾಗಿದೆ
ಉ	ಹಾಗಿದ್ದಲ್ಲಿ, ಜಿಲ್ಲವಾರು ವಿತರಣೆಯಾದ ಮೇವಿನ ಪ್ರಮಾಣ ಎಷ್ಟು?	ದೇವಣ ಮೂಲಕ ಸರ್ವಜನಿಕರ ಸಹಾಕಾರದೊಂದಿಗೆ ಚಿತ್ರದುರ್ಗ ಜಿಲ್ಲೆಯ ದೊಡ್ಡ ಉಳ್ಳಾವರ್ತಿ ಮತ್ತು ರಾಂಪುರ ಗ್ರಾಮದಲ್ಲಿ ತಲಾ ೫೦ ಟನ್ನಿನಂತೆ ಒಟ್ಟು ೧೦೦ ಟನ್ನು ಒಣಮೇವನ್ನು ಎರಡು ಮೇವು ನಿಧಿಗಳಲ್ಲಿ ಸಂಗ್ರಹಿಸಿಡಲಾಗಿದೆ ಆದರೆ, ಇದುವರೆವಿಗೆ ಒಣಮೇವು ವಿತರಣೆಯಾಗಿರುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೬೭೩ (೧೬೯೩)

ಸದಸ್ಯರ ಹೆಸರು ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ (ಬೆಳ್ಳಾವಿ)

ಉತ್ತರಿಸುವ ಸಚಿವರು ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಕ್ರ ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಪರಿಶಿಷ್ಟ ವರ್ಗದವರು ಹೆಚ್ಚಾಗಿ ವಾಸಿಸುತ್ತಿರುವ ಜಿಲ್ಲೆಗಳು ಯಾವುದು?	ರಾಜ್ಯದಲ್ಲಿ ಪರಿಶಿಷ್ಟ ವರ್ಗದವರು ಹೆಚ್ಚಾಗಿ ವಾಸಿಸುತ್ತಿರುವ ಜಿಲ್ಲೆಗಳು ಈ ಕೆಳಕಂಡಂತಿವೆ